1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.
ಎಸ್. ಸಿ. ಸಂಖ್ಯೆ: 05/2020

| | |
|---|---|
| ಪಿ.ಡಬ್ಲ್ಯೂ: | 06 |
| ಸಿ.ಡಬ್ಲ್ಯೂ: | 08 |
| ಪ್ರ.ಬೋ.ದಿನಾಂಕ: | 03.08.2022. |

| | |
|---|---|
| ಹೆಸರು ಶ್ರೀ/ಶ್ರೀಮತಿ :: | ರೇಣುಕಮ್ಮ |
| ತಂದೆಯ/ಗಂಡನ ಹೆಸರು :: | ಹನುಮಂತಪ್ಪ |
| ವಯಸ್ಸು :: | 63 ವರ್ಷ |
| ಉದ್ಯೋಗ :: | ಗೃಹಿಣಿ |
| ವಾಸ :: | ದಾವಣಗೆರೆ |

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ-1 ಶ್ರೀನಿವಾಸ ನನ್ನ ಅಳಿಯ. ನನಗೆ ಒಟ್ಟು 4 ಜನ ಮಕ್ಕಳು. ಮೃತೆ ವಸಂತ ನನ್ನ 3 ನೇ ಮಗಳು. ಮೃತೆ ವಸಂತಳಿಗೆ ಇಬ್ಬರೂ ಮಕ್ಕಳು, ಅವರುಗಳೆಂದರೆ ಭಾವನಾ ಮತ್ತು ಅನುಷ್ಕಾ. ಆರೋಪಿ ಲಾಟರಿ ವ್ಯಾಪಾರ ಮಾಡುತ್ತಿದ್ದ. ನನ್ನ ಮೃತೆ ಮಗಳು, ಆಕೆಯ ಗಂಡ ಮತ್ತು ಮಕ್ಕಳು ಮೊದಲು ವಿನೋಬನಗರದಲ್ಲಿ ನಮ್ಮ ಮನೆಯಲ್ಲಿ ವಾಸಮಾಡುತ್ತಿದ್ದರು. ಅವರು ಒಂದು ಮನೆಯಲ್ಲಿ ವಾಸಮಾಡುತ್ತಿದ್ದರು, ಉಳಿದ 3 ಮನೆಯನ್ನು ಬಾಡಿಗೆಗೆ ಕೊಟ್ಟಿದ್ದೇವು. ಉಳಿದ 3 ಮನೆಯಲ್ಲಿ ಒಂದು ಮನೆಯನ್ನು ಆರೋಪಿ ರಾಕೇಶ್ ನಿಗೆ ಬಾಡಿಗೆಗೆ ಕೊಟ್ಟಿದ್ದೇವು. ಆನಂತರ ಸದರಿ ನನ್ನ ಮಗಳು, ಅಳಿಯ ಮತ್ತು ಮೊಮ್ಮಕ್ಕಳು ಕುವೆಂಪು ನಗರದಲ್ಲಿ ವಾಸಮಾಡುತ್ತಿದ್ದರು. ಆರೋಪಿ ರಾಕೇಶ ನನ್ನ ಮಗಳ ಜೊತೆ ಸಂಬಂಧ ಇಟ್ಟುಕೊಂಡು ದುಡ್ಡು ಕೊಡು, ಒಡವೆ ಕೊಡು ಎಂದು ಹಿಂಸೆ ಮಾಡುತ್ತಿದ್ದ ಹಾಗೂ ಮಕ್ಕಳಿಗೆ ಚಾಕು ತೋರಿಸಿ ಹೆದರಿಸುತ್ತಿದ್ದ. ಕುವೆಂಪು ನಗರದಲ್ಲಿ ಅವರು ವಾಸಮಾಡುತ್ತಿದ್ದಾಗಲೂ ಸಹ ನನ್ನ ಮಗಳ ಗಂಡ ಮತ್ತು ಮಕ್ಕಳು ಇಲ್ಲದ ಸಮಯದಲ್ಲಿ ಆರೋಪಿ ಅಲ್ಲಿಗೆ ಹೋಗಿ ಸಹ ನನ್ನ ಮಗಳ ಜೊತೆ ಗಲಾಟೆ ಮಾಡುತ್ತಿದ್ದ.

2. ಇಲ್ಲಿಗೆ ಸುಮಾರು 4 ವರ್ಷದ ಹಿಂದೆ ನನ್ನ ಮಗಳು ಮತ್ತು ಮೊಮ್ಮಗಳು ಇಬ್ಬರೂ ಕುವೆಂಪುನಗರದ ಅವರ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ. ನನ್ನ ಮಗಳು ನೇಣು ಹಾಕಿಕೊಳ್ಳಲು ಆರೋಪಿಯೇ ಕಾರಣ ಆಗಿರುತ್ತಾರೆ. ನನ್ನ ಮೊಮ್ಮಗಳು ಭಾವನಾ ಅಮ್ಮ ಬಾಗಿಲು ತೆಗೆಯುತ್ತಿಲ್ಲ ಎಂದು ಫೋನ್ ಮಾಡಿದ್ದಳು, ನಾವು ಅಲ್ಲಿಗೆ ಹೋಗಿ ನೋಡಿದಾಗ ನನ್ನ ಮಗಳು ಮತ್ತು ಮೊಮ್ಮಗಳು ಅವರ ಮನೆಯಲ್ಲಿ ನೇಣು ಹಾಕಿಕೊಂಡಿದ್ದರು. ಸಾಕ್ಷಿ ನಿಪಿ-3 ರಿಂದ 18 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

3. ಸಾಕ್ಷಿ ನಿಪಿ-3 ರಿಂದ 18 ರ ಫೋಟೋಗಳನ್ನು ನೋಡಿ ಸಾಕ್ಷಿ ಬಾಕ್ಸನಲ್ಲಿ ಅಳುತ್ತಿರುತ್ತಾರೆ. ನ್ಯಾಯಾಲಯ ಸಮಾಧಾನ ಪಡಿಸಿರುತ್ತದೆ.

ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಟಿ ಹೆಚ್ ವಕೀಲರಿಂದ:

4. ವಿನೋಬನಗರದ ನನ್ನ ಮಗಳ ಮನೆಯ ಸುತ್ತಮುತ್ತ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ನನ್ನ ಮಗಳು ಮತ್ತು ಅಕೆಯ ಕುಟುಂಬದವರು 1 ನೇ ಮಹಡಿಯಲ್ಲಿ ವಾಸಮಾಡುತ್ತಿದ್ದರು. ನೆಲಮಹಡಿಯಲ್ಲಿ ನನ್ನ

ಅಳಿಯ ಶ್ರೀನಿವಾಸ ಸಹೋದರನ ಕುಟುಂಬದವರು ವಾಸಮಾಡುತ್ತಿದ್ದರು ಎಂದರೆ ಸರಿ. ಅವರ ಮನೆಯಲ್ಲಿ 5 ಜನ ಇದ್ದರು ಎಂದರೆ ಸರಿ. 1 ನೇ ಮಹಡಿಗೆ ಯಾರಾದರೂ ಹೋದರೆ ನೆಲ ಮಹಡಿ ಮನೆಯವರಿಗೆ ಗೊತ್ತಾಗುತ್ತಿತ್ತು ಎಂದರೆ ಸರಿ. ಸಾಕ್ಷಿಗೆ ನಿಮ್ಮ ಮಗಳು ಮತ್ತು ಅಳಿಯ ಮಧ್ಯೆ ಸುಮಾರು 17 ವರ್ಷಗಳ ಅಂತರ ಇದೆ ಎಂದರೆ ಸಾಕ್ಷಿ ಮದುವೆ ಕಾಲಕ್ಕೆ ನನ್ನ ಅಳಿಯನಿಗೆ 30-35 ವರ್ಷ ಆಗಿರಬಹುದು ಆಗ ನನ್ನ ಮಗಳಿಗೆ 20-21 ವರ್ಷ ವಯಸ್ಸಾಗಿತ್ತು ಎಂದು ನುಡಿದಿದ್ದಾರೆ.

5. ಸಾಕ್ಷಿಗೆ ಆರೋಪಿ ನಿಮ್ಮ ಮಗಳಿಗೆ ದುಡ್ಡು ಕೊಡು, ಒಡವೆ ಕೊಡು ಎಂದು ಕೇಳುತ್ತಿದ್ದ ಎಂದು ನಿಮ್ಮ ಮುಂದೆ ಎಂದಾದರೂ ಹೇಳಿದ್ದಾರಾ ಎಂದು ಪ್ರಶ್ನಿಸಲಾಗಿ ನನ್ನ ಮೊಮ್ಮಗಳು ಭಾವನಾ ಹೇಳಿದ್ದಾಳೆ, ನನ್ನ ಮಗಳು ಎಂದು ಹೇಳಿಲ್ಲ ಎಂದು ನುಡಿದಿದ್ದಾರೆ. ಈ ರೀತಿ ಪೊಲೀಸರ ಮುಂದೆ ಹೇಳಿದ್ದೇನೆ. ನನ್ನ ಮೊಮ್ಮಗಳು ಆ ವಿಚಾರವನ್ನು ಹೇಳಿದ ನಂತರ ನಾನು ಆರೋಪಿಯ ತಂದೆ ತಾಯಿಯ ಬಳಿ ಎಂದು ಕೇಳಿಲ್ಲ.ಸಾಕ್ಷಿ ಮುಂದುವರಿದು ಮಗಳು ಸತ್ತಾಗಲೇ ನಮಗೆ ಆ ವಿಚಾರ ಗೊತ್ತಾಯಿತು ಎಂದು ನುಡಿದಿದ್ದಾರೆ. ಈ ವಿಚಾರವನ್ನು ಪೊಲೀಸರ ಮುಂದೆ ಹೇಳಿದ್ದೇನೆ. ನಿಮ್ಮ ಮಗಳು ಸಾಯುವುದಕ್ಕಿಂತ ಮೊದಲು ನಿಮ್ಮ ಮಗಳಾಗಲೀ, ಮೊಮ್ಮಳಾಗಲೀ, ಅಳಿಯನಾಗಲೀ ನಿಮ್ಮ ಮುಂದೆ ಈ ವಿಚಾರವನ್ನು ಹೇಳಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದಾರೆ. ಸಾಕ್ಷಿ ಮುಂದುವರಿದು ಆರೋಪಿ ಎದುರಿಸುತ್ತಿದುದ್ದರಿಂದ ಅವರು ಯಾರು ಹೇಳಿಲ್ಲ ಎಂದು ನುಡಿದಿದ್ದಾರೆ. ಆ ವಿಚಾರವನ್ನು ಪೊಲೀಸರ ಮುಂದೆ ನನ್ನ ಮಗಳು ಸತ್ತ ಮೂರು ದಿನದ ನಂತರ ಹೇಳಿದ್ದೇನೆ. ನಾನು ಎಂದು ಸಹ ಆರೋಪಿ ನನ್ನ ಮಗಳ ಮನೆಗೆ ಹೋಗುವುದಾಗಲೀ ಬರುವುದಾಗಲೀ ಮಾಡುವುದನ್ನು ನೋಡಿಲ್ಲ. ನನ್ನ ಅಳಿಯ ಈ ವಿಚಾರವನ್ನು ನನ್ನ ಮಗಳು ಸಾಯುವುದಕ್ಕಿಂತ ಮುಂಚೆ ನನ್ನ ಮುಂದೆ ಹೇಳಿರುವುದಿಲ್ಲ. ನನ್ನ ಅಳಿಯ ನನ್ನ ಮಗಳ ಶೀಲದ ಮೇಲೆ ಅನುಮಾನ ಪಡುತ್ತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗಂಡ ಹೆಂಡತಿ ಪ್ರೀತಿಯಿಂದ ಇರುತ್ತಿದ್ದರು ಎಂದು ನುಡಿದಿದ್ದಾರೆ. ನಿಮ್ಮ ಮಗಳು ಆರೋಪಿಗೆ ಹಣವಾಗಲೀ ಒಡವೆಯಾಗಲೀ ಕೊಟ್ಟಿರುವುದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ನನ್ನ ಮೊಮ್ಮಗಳು ಆ ವಿಚಾರವನ್ನು ನನ್ನ ಮುಂದೆ ಹೇಳಿದ್ದಾಳೆ, ಆದರೆ ನನ್ನ ಮಗಳ ಬಳಿ ಆ ಒಡವೆಗಳು ಇದುದ್ದು ನನಗೆ ಗೊತ್ತಿದೆ ಎಂದು ನುಡಿದಿದ್ದಾರೆ.

6. ನಾಲ್ಕು ಜೊತೆ ಕಿವಿಯೋಲೆ, ಎರಡು ನೇಕ್ಲೇಸ್, ಆರು ಬಳೆಗಳನ್ನು ನನ್ನ ಮಗಳು ಆರೋಪಿಗೆ ಕೊಟ್ಟಿದ್ದಳು. ಈ ವಿಚಾರವನ್ನು ಪೊಲೀಸರ ಮುಂದೆ ಹೇಳಿದ್ದೇನೆ. ನಿಮ್ಮ ಅಳಿಯ ನಿಮ್ಮ ಮಗಳಿಗೆ ಆಕೆಯ ಶೀಲದ ಮೇಲೆ ತೊಂದರೆ ಕೊಡುತ್ತಿದ್ದ ಆ ಕಾರಣದಿಂದ ಆಕೆ ತನ್ನ ಮಗಳನ್ನು ನೇಣು ಹಾಕಿ ತಾನು ನೇಣು ಹಾಕಿಕೊಂಡಿದ್ದಾಳೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿದ್ದಾರೆ. ಅವರಿಬ್ಬರೂ ಮೊದಲಿನಿಂದಲೂ ಸರಿ ಇರಲಿಲ್ಲ ಆ ವಿಚಾರ ನಿಮಗೆ ಗೊತ್ತು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿದ್ದಾರೆ. ಸಾಕ್ಷಿ ಮುಂದುವರಿದು ರಾಕೇಶ ಬಂದ ಮೇಲೆಯೇ ಈ ಘಟನೆ ಎಲ್ಲಾ ನಡೆದಿದೆ ಎಂದು ನುಡಿದಿದ್ದಾರೆ. ಆರೋಪಿ ನನ್ನ ಮಗಳ ಜೊತೆ ಸಂಬಂಧ ಇಟ್ಟುಕೊಂಡಿದ್ದ, ಆತ ಹಣಕ್ಕೆ ಒಡವೆಗೆ ತೊಂದರೆ ಕೊಡುತ್ತಿದ್ದ ಆದ್ದರಿಂದ ಆಕೆ ಮತ್ತು ಆಕೆಯ ಮೊಮ್ಮಗಳು ನೇಣು ಹಾಕಿಕೊಂಡು ಸತ್ತಿದ್ದಾಳೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆರೋಪಿ ರಾಕೇಶ ನಿಮ್ಮ ಅಜ್ಜ ಅಜ್ಜಿಗೆ ಸಾಯಿಸುತ್ತೇನೆಂದು ಹೇಳುತ್ತಿದ್ದ ಎಂದು ನನ್ನ ಮೊಮ್ಮಗಳು ಹೇಳಿದ್ದಾಳೆ ಎಂದು ನುಡಿದಿದ್ದಾರೆ. ಈ ವಿಚಾರವನ್ನು ಪೊಲೀಸರ ಮುಂದೆ ಹೇಳಿದ್ದೇನೆ. ನಿಮ್ಮ ಮಗಳು ಮೊಮ್ಮಗಳ ಸಾವಿಗೂ

ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಸಂಬಂಧ ಇದೆ ಎಂದು ನುಡಿದಿದ್ದಾರೆ. ಆರೋಪಿ ನನ್ನ ಮಗಳಿಗೆ ಹಿಂಸೆ ಕೊಡುತ್ತಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ಮತ್ತು ನನ್ನ ಅಳಿಯನ ವಯಸ್ಸಿನ ಅಂತರವೂ ಸಹ ಆಕೆಯ ಸಾವಿಗೆ ಕಾರಣ ಆಗಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.